## ನಿಮ್ಮೊಡನೆ

# ಶಾಲೆಗಳಲ್ಲಿ ಮೊಬೈಲ್ ನಿರ್ಬಂಧ

ಶಾಲಾ ಅವಧಿಯಲ್ಲಿ ಶಿಕ್ಷಕರು ಮೊಬೈಲ್ ಫೋನ್‌ಗಳನ್ನು ಬಳಸದಂತೆ ನಿರ್ಬಂಧಿಸಿರುವ ಶಿಕ್ಷಣ ಇಲಾಖೆಯ ಕ್ರಮ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸ್ವಾಗತಾರ್ಹ. ಇದರಿಂದಾಗಿ ಶಿಕ್ಷಕರ ಗಮನ ಬೇರೆಡೆ ಹರಿಯುವುದು ತಪ್ಪುವುದರ ಜೊತೆಗೆ, ಶಾಲಾ ಸಮಯದಲ್ಲಿ ಶಿಕ್ಷಕರು ತಮ್ಮ ಗಮನವನ್ನು ಸಂಪೂರ್ಣವಾಗಿ ಮಕ್ಕಳ ಕಲಿಕೆಯತ್ತ ಕೇಂದ್ರೀಕರಿಸಲು ಸಾಧ್ಯವಾಗುತ್ತದೆ. ಸದ್ಯಕ್ಕೆ ಈ ಆದೇಶ ಬೆಂಗಳೂರು ಮತ್ತು ಬೀದರ್ ಜಿಲ್ಲೆಯ ಶಾಲೆಗಳಲ್ಲಿ ಅನುಷ್ಠಾನಗೊಂಡಿದ್ದು, ಉಳಿದ ಜಿಲ್ಲೆಗಳಲ್ಲೂ ಇದು ಕಾರ್ಯಗತಗೊಳ್ಳಬೇಕಿದೆ.

ಸರ್ಕಾರಿ ಶಾಲೆಯ ಬೋಧಕರು ಮಾತ್ರವಲ್ಲದೆ ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಿಗೆ ಕೂಡ ಮೊಬೈಲ್ ಬಳಕೆಯ ನಿರ್ಬಂಧ ಅನ್ವಯಗೊಂಡಿರುವುದು ವಿಶೇಷ. ಈ ಆದೇಶ ಏಕಾಏಕಿ ಜಾರಿಗೊಂಡಿರುವುದೇನೂ ಅಲ್ಲ. ತರಗತಿ ನಡೆಯುವ ಸಂದರ್ಭದಲ್ಲಿ ಶಿಕ್ಷಕರು ಮೊಬೈಲ್‌ನಲ್ಲಿ ಹೆಚ್ಚಿನ ಸಮಯ ಕಳೆಯುವುದರ ಬಗ್ಗೆ ವ್ಯಾಪಕ ದೂರುಗಳು ಶಿಕ್ಷಣ ಇಲಾಖೆಗೆ ಬಂದಿದ್ದವು. ಕೆಲವು ಶಿಕ್ಷಕರು ತರಗತಿಗಳಿಗಿಂತಲೂ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಸಕ್ರಿಯರಾಗಿರುವ ಬಗ್ಗೆಯೂ ಆಕ್ಷೇಪಗಳು ವ್ಯಕ್ತವಾಗಿದ್ದವು. ಈ ಹಿನ್ನೆಲೆಯಲ್ಲಿ ಶಾಲಾ ಸಮಯದಲ್ಲಿ ಮೊಬೈಲ್ ಬಳಕೆಯನ್ನು ನಿಷೇಧಿಸುವ ತೀರ್ಮಾನಕ್ಕೆ ಶಿಕ್ಷಣ ಇಲಾಖೆ ಬಂದಿದೆ. ಈ ಆದೇಶವನ್ನು ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿಯೂ ಇಲಾಖೆ ಎಚ್ಚರಿಸಿದೆ.

ಕೆಲವು ಶಿಕ್ಷಕರು ಮೊಬೈಲ್‌ಗಳನ್ನು ಗುಟ್ಟಾಗಿ ಬಳಸುತ್ತಿದ್ದಾರೆ. ಜಾಲತಾಣಗಳ ಬಳಕೆಗೆ ಒಂದು, ಮಾತನಾಡಲು ಮತ್ತೊಂದು ಮೊಬೈಲ್ ಫೋನ್ ಹೊಂದಿರುವ ಶಿಕ್ಷಕರೂ ಇದ್ದಾರೆ. ಇಂಥ ಮೊಬೈಲ್‌ವ್ಯಸನಿ ಶಿಕ್ಷಕರ ಗಮನವನ್ನು ಬೋಧನೆಯತ್ತ ಕೇಂದ್ರೀಕರಿಸಲು ಪ್ರಸ್ತುತ ಆದೇಶ ಅವಕಾಶ ಕಲ್ಪಿಸಲಿದೆ. ಇನ್ನು ಮುಂದೆ, ಇಲಾಖೆಯ ಅನುಮತಿ ಇಲ್ಲದೆ ಯಾವುದೇ ಶಿಕ್ಷಕರು ಶಾಲಾ ಪರಿಸರದಲ್ಲಿ ಗ್ಯಾಜೆಟ್‌ಗಳನ್ನು ಬಳಸುವಂತಿಲ್ಲ. ಶಿಕ್ಷಕರ ಮೊಬೈಲ್ ಬಳಕೆಯ ಬಗ್ಗೆ ನಿಗಾ ವಹಿಸುವ ಜವಾಬ್ದಾರಿಯನ್ನು ಮುಖ್ಯ ಶಿಕ್ಷಕರಿಗೆ ನೀಡಲಾಗಿದ್ದು, ಅವರಿಗೆ ಬೋಧನೆಯ ಸಂದರ್ಭ ಹೊರತುಪಡಿಸಿ ಉಳಿದ ಸಮಯದಲ್ಲಿ ಸೆಲ್‌ಫೋನ್ ಬಳಕೆಗೆ ಅವಕಾಶ ಕಲ್ಪಿಸಲಾಗಿದೆ. ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಶಿಕ್ಷಣ ಮಂತ್ರಿಯಾಗಿದ್ದ ಸಮಯದಲ್ಲೇ ಶಾಲೆಗಳಲ್ಲಿ ಮೊಬೈಲ್ ಬಳಕೆಯನ್ನು ನಿಷೇಧಿಸುವ ಆದೇಶ ಹೊರಬಿದ್ದಿತ್ತು. ಆದರೆ, ಆ ನಿರ್ಬಂಧ ಕಟ್ಟುನಿಟ್ಟಾಗಿ ಜಾರಿಗೊಂಡಿರಲಿಲ್ಲ. ಪ್ರಸ್ತುತ ಬೆಂಗಳೂರು ಮತ್ತು ಬೀದರ್‌ಗಳಲ್ಲಿ ಕಟ್ಟುನಿಟ್ಟಾಗಿ ಜಾರಿಗೊಂಡಿದೆ.

ವಿದ್ಯಾರ್ಥಿಗಳ ಹಿತಾಸಕ್ತಿ ದೃಷ್ಟಿಯಿಂದ ಜಾರಿಗೆ ತಂದಿರುವ ಆದೇಶವನ್ನು ಜಾರಿಗೊಳಿಸಲು ಶಿಕ್ಷಕವರ್ಗ ಕೂಡ ಮುಕ್ತ ಮನಸ್ಸಿನಿಂದ ಸ್ವೀಕರಿಸಬೇಕಾಗಿದೆ. ಶಾಲೆಗಳ ಪರಿಸರವನ್ನು ಶೈಕ್ಷಣಿಕ ಚಟುವಟಿಕೆಗಳಿಗೆ ಮೀಸಲಿಡುವುದನ್ನು ಕಾನೂನಿನ ರೀತಿಯಲ್ಲಿ ಭಾವಿಸುವ ಬದಲು, ಅದನ್ನೊಂದು ನೈತಿಕಸಂಹಿತೆಯ ರೂಪದಲ್ಲಿ ಒಪ್ಪಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಶಿಕ್ಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಮೂಲಕ ಶಾಲಾ ಪರಿಸರವನ್ನು ಸೆಲ್‌ಫೋನ್ ಚಟುವಟಿಕೆಗಳಿಂದ ಮುಕ್ತವಾಗಿಡಲು ಪ್ರಯತ್ನಿಸಬೇಕು.

ಶಿಕ್ಷಕರನ್ನು ಮೊಬೈಲ್ ಫೋನ್‌ಗಳಿಂದ ದೂರವಿರಿಸುವಲ್ಲಿ ಉತ್ಸುಕವಾಗಿರುವ ಶಿಕ್ಷಣ ಇಲಾಖೆ ಬೋಧಕರ ಮೇಲಿರುವ ಇತರ ಹೊರೆಗಳನ್ನು ಇಳಿಸುವ ಬಗ್ಗೆಯೂ ಪ್ರಾಮಾಣಿಕ ಪ್ರಯತ್ನ ನಡೆಸಬೇಕು. ತರಗತಿಗಳ ಬಾಗಿಲು ತೆರೆದು ತಿಂಗಳ ಮೇಲಾದರೂ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಂಡಿಲ್ಲ. ರಾಜ್ಯದ ಎಲ್ಲ ಮಕ್ಕಳಿಗೆ ಪಠ್ಯಪುಸ್ತಕಗಳನ್ನು ಒದಗಿಸುವಲ್ಲಿಯೂ ಇಲಾಖೆ ಯಶಸ್ವಿಯಾಗಿಲ್ಲ. ಕಳೆದ ಕೆಲವು ವರ್ಷಗಳಿಂದ ಮಕ್ಕಳ ಕೊರತೆಯ ನೆಪದಲ್ಲಿ ಶಾಲೆಗಳನ್ನು ಮುಚ್ಚುವುದು ವಾರ್ಷಿಕ ಸಂಪ್ರದಾಯವಾಗಿಬಿಟ್ಟಿದೆ. ಇದೆಲ್ಲದರ ಜೊತೆಗೆ, ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಗಳ ವಿವಿಧ ಜವಾಬ್ದಾರಿಗಳನ್ನು ಶಿಕ್ಷಕರು ನಿರ್ವಹಿಸಬೇಕಾಗಿದೆ. ಮಕ್ಕಳ ಭವಿಷ್ಯವನ್ನು ರೂಪಿಸಬೇಕಾದ ಮೇಷ್ಟ್ರುಗಳ ಅಮೂಲ್ಯ ಸಮಯ ಜನಪ್ರತಿನಿಧಿಗಳ ಆಯ್ಕೆಯ ಚುನಾವಣೆಗೆ ವ್ಯಯವಾಗುತ್ತಿದೆ. ಈ ಕೆಲಸ ಕಾರ್ಯಗಳಿಗೆ ನಿರುದ್ಯೋಗಿ ಯುವಕರ ಜೊತೆಗೆ ಶಿಕ್ಷಣೇತರ ಇಲಾಖೆಯ ನೌಕರರನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಳಸಿಕೊಳ್ಳುವ ಬಗ್ಗೆ ಯಾವ ಸರ್ಕಾರವೂ ಹೆಚ್ಚಿನ ಗಮನ ಹರಿಸಿದಂತಿಲ್ಲ. ದಸರೆ ಹಾಗೂ ಬೇಸಿಗೆ ರಜೆಯ ಅವಧಿ ಕೂಡ ವಿವಿಧ ಕಾರ್ಯಕ್ರಮಗಳ ಹೆಸರಿನಲ್ಲಿ ಕಡಿತಗೊಂಡಿದೆ. ಬೋಧನೆಯ ಜವಾಬ್ದಾರಿ ಹೊರತುಪಡಿಸಿ ಇತರ ಚಟುವಟಿಕೆಗಳಿಂದ ಶಿಕ್ಷಕರನ್ನು ಮುಕ್ತಗೊಳಿಸದೆ ಹೋದರೆ ಅವರಲ್ಲಿ ವೃತ್ತಿಪರತೆಯನ್ನು ನಿರೀಕ್ಷಿಸುವುದು ಹೇಗೆ?

ಶಾಲಾ ಪರಿಸರದಲ್ಲಿ ಮೊಬೈಲ್ ಫೋನ್ ಬಳಕೆಯಿಂದ ಶಿಕ್ಷಕರನ್ನು ದೂರ ಇರಿಸುವಂತೆಯೇ, ಶಿಕ್ಷಣೇತರ ಚಟುವಟಿಕೆಗಳಿಂದಲೂ ಅವರನ್ನು ಮುಕ್ತಗೊಳಿಸಿದಾಗಲಷ್ಟೇ ವಿದ್ಯಾರ್ಥಿಗಳ ಹಿತಾಸಕ್ತಿ ರಕ್ಷಣೆಗೊಂದು ತಾರ್ಕಿಕ ಆಯಾಮ ದೊರೆಯಲು ಸಾಧ್ಯ.

■ **ರಘುನಾಥ ಚ.ಹ.**

ಶಿಕ್ಷಕರನ್ನು ಮೊಬೈಲ್ ಫೋನ್‌ಗಳಿಂದ ದೂರವಿರಿಸುವಲ್ಲಿ ಉತ್ಸುಕವಾಗಿರುವ ಶಿಕ್ಷಣ ಇಲಾಖೆ ಬೋಧಕರ ಮೇಲಿರುವ ಇತರ ಹೊರೆಗಳನ್ನು ಇಳಿಸುವ ಬಗ್ಗೆಯೂ ಪ್ರಾಮಾಣಿಕ ಪ್ರಯತ್ನ ನಡೆಸಬೇಕು. ತರಗತಿಗಳ ಬಾಗಿಲು ತೆರೆದು ತಿಂಗಳ ಮೇಲಾದರೂ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಂಡಿಲ್ಲ.



ಈಶ್ವರ್